## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ದತ್ತಾತ್ರೇಯ ಆರ್.ಢಗೆ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ವಿ.ಕೆ.ಸಲಗರ ಗ್ರಾಮ ಪಂಚಾಯಿತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆ-ಅಂತಿಮ ಆದೇಶ ಹೊರಡಿಸುವ ಬಗ್ಗೆ-ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/13/ಗ್ರಾಪಂಕಾ/2012 ದಿನಾಂಕ:12-01-2012
2. ಅಪರ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: LOK/INQ/14-A/37/2012 Dt:12-08-2016.
3. ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: LOK/INQ/14-A/37/2012 Dt:29-08-2016.
4. ನಿಬಂಧಕರು ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ಪತ್ರ ಸಂಖ್ಯೆ: LOK/INQ/14-A/37/2012 Dt: 30-08-2016.
5. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ/548/ಗ್ರಾಪಂಕಾ/2016 ದಿನಾಂಕ:08-11-2016.
6. ಶ್ರೀ ದತ್ತಾತ್ರೇಯ ಆರ್.ಢಗೆ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 06-12-2017.

**ಪ್ರಸ್ತಾವನೆ :**

ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ದತ್ತಾತ್ರೇಯ ಆರ್.ಢಗೆ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ವಿ.ಕೆ.ಸಲಗರ ಗ್ರಾಮ ಪಂಚಾಯಿತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14-ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು. ಅದರಂತೆ ಅಪರ ನಿಬಂಧಕರು ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿ ಈ ಕೆಳಕಂಡ ದೋಷರೋಪಣೆಗಳನ್ನು ನೀಡಿರುತ್ತಾರೆ.

**"ದೋಷಾರೋಪಣೆ"**

"That you Sri Dattartreya R. Dhage, (hereinafter referred to as Delinquent Government official, in short DGO) while working as Secretary of V.K. Salagara village Panchayath, Aland Taluk, Gulbarga District collected an amount of Rs. 4,59,950/- by auctioning the right of collecting taxes from various commercial places (markets) on behalf of the V.K. Salagara Village Panchayath office and by sale of dund fertilizer and ghee and that instead of depositing the said bed amount of Rs. 4,59,950/- collected from auction, a sum of Rs. 1,51,1614/- was directly spent without remitting the same into Grama Panchayath fund and a sum of Rs. 1,86,111/- was unaccounted and no vouchers and other subsidiary records were furnished and it was also directly spent without deposting the same in grama panchayath fund and a sum of Rs.85,350/- was deposited in the joint account of Sri Hanumantharaya, Sri Chandrakanth, Sri M.T. Akshar Bai and Sri Santhosh

Kumar and members of V.K Salagara Village Panchayath office and thereby committed irregularities violating the provisions of Section 212 and Rule 15 of the Karnataka Panchayath Raj ( Accounts and Budget) Rules, 1995, which act of yours is a dereliction of duty and unbecoming of a Government servants and failing to maintain absolute integrity and devotion to duty and thus, you are guilty of misconduct under Rule3(1) (i) (ii)(iii) of KCS (Conduct) Rules, 1966".

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ವರದಿಯಲ್ಲಿ ಶ್ರೀ ದತ್ತಾತ್ರೇಯ ಆರ್.ಢಗೆ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ವಿ.ಕೆ.ಸಲಗರ ಗ್ರಾಮ ಪಂಚಾಯಿತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಈ ವರದಿಯನ್ನು ಉಪಲೋಕಾಯುಕ್ತರು ಅಂಗೀಕರಿಸಿ ಶ್ರೀ ದತ್ತಾತ್ರೇಯ ಆರ್.ಢಗೆ ರವರು ವಿ.ಕೆ.ಸಲಗರ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಇವರು 2001-02 ಮತ್ತು 2002-03 ನೇ ಸಾಲಿನಲ್ಲಿ ಧಾನ್ಯ ಅಳೆಯುವ ಮಾಪನಗಳ ಹರಾಜು ಸಂಬಂಧ ವಸೂಲಾದ ರೂ.1,45,900/- ಗಳಿಗೆ ಲೆಕ್ಕಪತ್ರ ಇಡದೆ ಹಣವನ್ನು ಬೇರೆ ಬೇರೆ ಉದ್ದೇಶಗಳಿಗೆ ಖರ್ಚು ಮಾಡಿದ್ದು, ಮತ್ತು ಸಂತೆ ಹರಾಜಿನಿಂದ ಬಂದ ರೂ.85,350/- ಗಳನ್ನು ಗ್ರಾಮ ಪಂಚಾಯಿತಿಯ ಖಾತೆಗೆ ಜಮಾ ಮಾಡದೇ ಗ್ರಾಮ ಪಂಚಾಯಿತಿಯ ಸದಸ್ಯರಾದ ಶ್ರೀ ಹನುಮಂತರಾಯ, ಶ್ರೀ ಚಂದ್ರಕಾಂತ್, ಶ್ರೀ ಎಮ್.ಟಿ ಅಕ್ಷರಭಾಯಿ, ಮತ್ತು ಶ್ರೀ ಸಂತೋಷ್ ಕುಮಾರ್, ಇವರುಗಳ ಜಂಟಿ ಖಾತೆಯಲ್ಲಿ ಜಮಾ ಮಾಡಿ ಸದರಿ ಗ್ರಾಮ ಪಂಚಾಯಿತಿಗೆ ಆರ್ಥಿಕ ನಷ್ಟ ಉಂಟು ಮಾಡಿರುವುದು ಸಾಬೀತಾಗಿರುವುದರಿಂದ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 214(1)(ಎ) ರ ನಿಯಮದಡಿ ನಿರ್ಧಿಷ್ಟಪಡಿಸಿದಂತೆ ಅವರ ನಿವೃತ್ತಿ ವೇತನದ 25% ಶಾಶ್ವತವಾಗಿ ಕಡಿತಗೊಳಿಸುವ ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಶ್ರೀ ದತ್ತಾತ್ರೇಯ ಆರ್.ಢಗೆ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಇವರಿಗೆ ನಿಯಮಾನುಸಾರ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟೀಸ್ಸನ್ನು ಜಾರಿಗೊಳಿಸಲಾಗಿತ್ತು. ಸದರಿ ನೋಟೀಸ್ಸಿಗೆ ಅವರು ಮೇಲೆ ಕ್ರಮ ಸಂಖ್ಯೆ (6) ರಲ್ಲಿ ತಮ್ಮ ಲಿಖಿತ ಹೇಳಿಕೆಯನ್ನು ಪರಿಶೀಲಿಸಿದ್ದು, ಎಲ್ಲಾ ಆರೋಪಗಳನ್ನು ತಳ್ಳಿಹಾಕಿದ್ದು, ಇದನ್ನು ಒಪ್ಪಲು ಬರುವುದಿಲ್ಲವಾದ ಕಾರಣ ವಿಚಾರಣಾಧಿಕಾರಿಯವರ ವರದಿಯನ್ನು ಪರಿಶೀಲಿಸಲಾಗಿ ವಿಚಾರಣಾಧಿಕಾರಿಯವರು ತಮ್ಮ ನಿರ್ಣಯ ಹಾಗೂ ವರದಿಯನ್ನು ದಾಖಲಿಸಿದ್ದು ಅದರ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ.

In this case , the charge framed against the DGO is that he, while working as the Secretary of V.K Salagara Village Panchayath, Aland District, Gulbarga District had collected amount of Rs.4,59,950/- from the auctioning of the rights to collect taxes from various commercial places and sale of manure and out of the said amount, he spent an amount of Rs.1,51,614/- directly without taking the said amount into the account of the Panchayath and no vouchers and records were maintained in respect of another sum of Rs.1,86,111/- and it was also sent directly without depositing the amount into the account of the Panchayath . It is also alleged that a sum of Rs.85,350/- was deposited in the personal account of President and other there three members of the Panchath in F.D country to the provisions of Karnataka Panchayathraj Act. The main defence of the DGO is that though he had not deposited the amount into the account of the Panchayath and spent the amount directly for various works, he has not misappropriated any

amount of the Panchayth . PW-2 is the investigating officer of Technical Audit Cell, Karnataka Lokayukta Bangalore, who investigated the complaint on the direction of Hon'ble Upalokayukta and he witness has given evidence about the irregularities committed by the DGO in maintaining the accounts of the Pachayath. The witness has specifically stated that DGO did not produce vouchers in respect of Rs.1,86,111/- during investigation. The witness had further stated that Rs.85,350/- was deposited in the fixed deposit in a bank in the name of private persons and Ex.P-19 is the pass book to show that the amount was deposited in F.D Pw-2 has stated that the amount of Rs.1,51,614/-, out of the amount received on auctioning of right to collect tax from commercial places, was spent directly without remitting the amount into the bank account of the Panchayath. From the stand taken by DGO during cross examination of PWs 1 and 2, it is crystal clear that V.K salagara Grama Panchayath had received Rs.4,59,950/- from auctioning of tights to collect taxes from the commercial places in the Village and also on sale of cow dung and the said amount was not remitted to the account of Panchayath and portion of the amount was directly apent for other works, which is contrary to provisions of Karnataka Panchayathraj Act. The evidence of PW-2 further shows that an amount of Rs. 85,350/- out of the amount received on auctioning the right to collect taxes was kept in fixed deposit in the name of private persons, who were the president and members of the Panchayath, which is illegal. The DGO has not disputed the said irregularities. During cross examination of PW-2 it is suggest to the witness that since the amount received on auctioning the rights to collect tax was in possession of members of grama Panchayath, they amount, a property was purchased by the Panchayath as per Ex.D-1. After careful scrutiny of the evidence gven by PWs 1 and 2 also stand taken by the DGO during cross – examination of the witnesses, it is clearly proved that the amount of Rs.4,59,950/- was not taken into the Panchayath after receipt of the said amount on places ad portion of the said amount was spent for other purpose directly which is highly illegal and country to the provisions of Karnataka financial code and the provisions of Karnataka Panchayath raj Act. It is also clearly proved that amount of Rs.85,350/- out of the amount received on auctioning of rights to collect taxes was deposited in fixed deposit in bank in the name of private persons, which is also illegal and contrary to the provisions of Karnataka Panchayathraj Act and Karnataka Financial Code.

ಸರ್ಕಾರವು ಆಪಾದಿತರು 2ನೇ ಕಾರಣ ಕೇಳುವ ನೋಟೀಸ್ಸೀಗೆ ನೀಡಿರುವ ಲಿಖಿತ ಹೇಳಿಕೆ ಮತ್ತು ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರು ಅಂಗೀಕರಿಸಿರುತ್ತಾರೆ ಮತ್ತು ಸದರಿಯವರು ಗ್ರಾಮ ಪಂಚಾಯಿತಿಯಲ್ಲಿ ಹರಾಜು ಸಂಬಂಧ ವಸೂಲಾದ ಹಣವನ್ನು ಬೇರೆ ಬೇರೆ ಉದ್ದೇಶಗಳಿಗೆ ಖರ್ಚುಮಾಡಿದ್ದು, ಸದರಿ ಗ್ರಾಮ ಪಂಚಾಯತಿಗೆ ಆರ್ಥಿಕ ನಷ್ಟ ಉಂಟು ಮಾಡಿರುವುದರಿಂದ ಈ ಕೆಳಂಕಂಡ ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

Having regard to the nature of charge proved against Sri. Dattathreya R. Dhage and retirement of Sri. Dattathreya R. Dhage on 31/01/2014, it is hereby recommended to the Government to accept the report of inquiry officer and to

impose penalty of **"permanently withholding 25% of pension payable to Sri. Dattathreya R. Dhage".**

ಸರ್ಕಾರವು ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಶ್ರೀ ದತ್ತಾತ್ರೇಯ ಆರ್.ಢಗೆ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ವಿ.ಕೆ.ಸಲಗರ ಗ್ರಾಮ ಪಂಚಾಯಿತಿ, ಇವರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಹೇಳಿಕೆ ಸಮರ್ಥನೀಯವಲ್ಲವೆಂದು ಕಂಡುಬಂದಿರುತ್ತದೆ. ಆದುದರಿಂದ ಸರ್ಕಾರವು ವಿಚಾರಣಾ ವರದಿ ಹಾಗೂ ಸದರಿ ವರದಿಯ ಮೇಲೆ ಮಾನ್ಯ ಉಪಲೋಕಾಯುಕ್ತರ ನಿರ್ಣಯವನ್ನು ಅಂಗೀಕರಿಸಿದೆ. ಮತ್ತು ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುವಂತೆ ಶ್ರೀ ದತ್ತಾತ್ರೇಯ ಆರ್.ಢಗೆ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ವಿ.ಕೆ.ಸಲಗರ ಗ್ರಾಮ ಪಂಚಾಯಿತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 214(1)(ಎ) ರ ನಿಯಮದಡಿ ನಿರ್ಧಿಷ್ಟಪಡಿಸಿದಂತೆ ಅವರ ನಿವೃತ್ತಿ ವೇತನದ 25% ಶಾಶ್ವತವಾಗಿ ಕಡಿತಗೊಳಿಸುವ ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:548:ಗ್ರಾಪಂಕಾ2017 ಬೆಂಗಳೂರು, ದಿನಾಂಕ-03-05-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಶ್ರೀ ದತ್ತಾತ್ರೇಯ ಆರ್.ಢಗೆ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ವಿ.ಕೆ.ಸಲಗರ ಗ್ರಾಮ ಪಂಚಾಯಿತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 214(1)(ಎ) ರ ನಿಯಮದಡಿ ನಿರ್ಧಿಷ್ಟಪಡಿಸಿದಂತೆ ಅವರ ನಿವೃತ್ತಿ ವೇತನದ 25% ಶಾಶ್ವತವಾಗಿ ಕಡಿತಗೊಳಿಸುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕಲಬುರಗಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ.
6. ಶ್ರೀ ದತ್ತಾತ್ರೇಯ ಆರ್.ಢಗೆ, ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ವಿ.ಕೆ.ಸಲಗರ ಗ್ರಾಮ ಪಂಚಾಯಿತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ,
7. ಗಣಕ ಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.